ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ವಿಷಯ: ಪಶುಗಳ ಚಿಕಿತ್ಸೆಗಾಗಿ ಔಷಧ ಸರಬರಾಜು.

2724 (3763)

ಶ್ರೀ ಅಲ್ಲಂ ವೀರಭದ್ರಪ್ಪ (ಕುರಗೋಡು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಗಳ ಚಿಕಿತ್ಸೆಗಾಗಿ ಔಷಧಗಳನ್ನು ಒದಗಿಸಲು ಬೇಕಾಗುವ ಅಂದಾಜು ಹಣವೆಷ್ಟು?

ಆ) ಸರ್ಕಾರವು ಇದಕ್ಕೆ ಒದಗಿಸುತ್ತಿರುವ ಹಣವೆಷ್ಟು?

ಇ) ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆಯೇ?

ಈ) ಜಿಲ್ಲಾ ಪಂಚಾಯಿತಿಗಳ ವತಿಯಿಂದ ಪಶು ಔಷಧಕ್ಕೆ ಹೆಚ್ಚಿನ ಮೊತ್ತ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ಪಶುವೈದ್ಯ ರಾಜ್ಯ ಸಚಿವರು):

ಅ) ರೂ.70.00 ಕೋಟಿ.

ಆ) ರೂ.4.43 ಕೋಟಿ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ವಂಟನದ ಲಭ್ಯತೆ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ಬಸವ ಜಯಂತಿ ಸಂದರ್ಭದಲ್ಲಿ ಪ್ರಶಸ್ತಿ ವಿತರಣೆ

2725 (3765)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಸವ ಜಯಂತಿ ಸಂದರ್ಭದಲ್ಲಿ ಸಮಾಜ ಸುಧಾರಕರಿಗೆ ಪ್ರಶಸ್ತಿ ನೀಡುವ ಪ್ರಸ್ತಾವನೆ ಸರ್ಕಾರದವರ ಮುಂದೆ ಇದೆಯೇ?

ಆ) ಇಲ್ಲದಿದ್ದಲ್ಲಿ, ಪ್ರತಿ ವರ್ಷ ಬಸವ ಜಯಂತಿ ಸಂದರ್ಭದಲ್ಲಿ ಪ್ರಶಸ್ತಿ ನೀಡಿ

ಸಮಾಜ ಸುಧಾರಕರನ್ನು ಗೌರವಿಸಲು ಸರ್ಕಾರದ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀಮತಿ ಲೀಲಾದೇವಿ ಆರ್‌ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ದುರ್ಬಲ ಸೇತುವೆಗಳ ದುರಸ್ತಿ.

2726 (3762)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಳ್ಳಾರಿ ಜಿಲ್ಲೆಯಲ್ಲಿರುವ ಅಲ್ಲಿಪುರ ಕುಡತಿನಿ ಗಾದಿಗವಾರು ಮತ್ತು ಹೊಸಪೇಟೆ ಹತ್ತಿರ ಕೆಲವು ಇಕ್ಕಟ್ಟಾದ ಮತ್ತು ದುರ್ಬಲ ಸೇತುವೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹೇಳಿರುವ ಎಲ್ಲಾ ಸೇತುವೆಗಳ ಮೇಲೆ ಭಾರಿ ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ ಸೇತುವೆಗಳು ದುರ್ಬಲವಾಗಿವೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಈ ಸೇತುವೆಗಳನ್ನು ದುರಸ್ತಿಪಡಿಸಲು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1. ಹೌದು.

2. ಗಮನಕ್ಕೆ ಬಂದಿದೆ.

3. ವಿದೇಶಿ ಸಾಲ ನೆರವು: ಖಾಸಗಿಯವರಿಂದ ಸೇತುವೆಗಳ ಪುನರ್ ನಿರ್ಮಾಣ ಮತ್ತು ರಸ್ತೆಯ ಭಾಗವನ್ನು ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುತ್ತಿದೆ.

ವಿಷಯ: ರಾಜ್ಯದಲ್ಲಿ ಪಶುಭಾಗ್ಯ ನಿಗಮ ಸ್ಥಾಪನೆ ಕುರಿತು.

2727 (3764)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಪಶುಸಂಗೋಪನಾ ರಾಜ್ಯ